**P.W-1**

**( ದಿನಾಂಕ.20-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ. P.N.S. ವಕೀಲರಿಂದ

ಸಾಕ್ಷಿಗೆ ಒಂದು ದೃಢಿಕೃತ ನಕಲಿನ ಗಣಕೀಕೃತ ಮ್ಯೂಟೇಶನ ತೋರಿಸುತ್ತಿದ್ದು ಅದರಲ್ಲಿ ಸಾಕ್ಷಿ ತಮ್ಮ ತಂದೆ ಮತ್ತು ಅಣ್ಣರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-11 ಎಂದು, ಸದರಿ ಸಹಿಗಳನ್ನು ನಿಡಿ-11(ಎ) ಮತ್ತು 11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-12 ಮತ್ತು 13 ಎಂದು, ಸಹಿಗಳನ್ನು ನಿಡಿ-12(ಎ) ನಿಡಿ-13(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಇನ್ನೊಂದು ವಾಟನಿ ಪತ್ರದ ಮತ್ತು ಹಕ್ಕುಪತ್ರದ ಮೇಲೆ ಸಾಕ್ಷಿ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ-14 ಮತ್ತು ನಿಡಿ-15 ಎಂದು, ತಮ್ಮ ತಂದೆಯ ಸಹಿಗಳನ್ನು ನಿಡಿ-14(ಎ) ಮತ್ತು ನಿಡಿ-15(ಎ) ಎಂದು ಗುರುತಿಸಲಾಯಿತು.

ನಿಡಿ-11 ರಿಂದ 15 ರ ವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನನ್ನ ತಂದೆ ಮತ್ತು ನನ್ನ ಅಣ್ಣ ವಾಟನಿ ಮಾಡಿಕೊಂಡಿರುತ್ತಾರೆ ಸಾಕ್ಷಿ ನಾನು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಎಲ್ಲ ದಾಖಲಾತಿಗಳ ಮೇಲೆ ನನ್ನ ತಂದೆ ಮತ್ತು ಅಣ್ಣ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಸಹಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಅಣ್ಣ ತಮ್ಮ ತಮ್ಮಲ್ಲಿ ಹಂಚಿಕೆ ಮಾಡಿಕೊಂಡು ಜಮೀನುಗಳನ್ನು ತಮ್ಮ ಕಬ್ಜಗೆ ತೆಗೆದುಕೊಂಡು ಪಹಣಿಗಳಲ್ಲಿ ತಮ್ಮ ಹೆಸರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲ ಕಾಗದ ಪತ್ರಗಳು ಆದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮತ್ತು ಇತರೆ ವಾದಿಗಳು ನನ್ನ ತಂದೆ ಜೀವಂತ ಇರುವ ಕಾಲಕ್ಕೆ ನಾವೆಲ್ಲರೂ ನಮ್ಮ ತವರುಮನೆಗೆ ಹೋಗಿ ಬಂದು ಮಾಡುತ್ತಿದ್ದೇವು. ನಾವು ಒಂದು ವರ್ಷಕ್ಕೆ ಆಷಾಡ ಉತ್ಸವಕ್ಕೆ ಹೋಗುತ್ತಿದ್ದೇವು. ನನ್ನ ತಂದೆ ಮತ್ತು ಅಣ್ಣನ ಸಂಬಂಧ ಒಳ್ಳೆಯದಾಗಿರುತ್ತದೆ.

4 ನೇ ಪ್ರತಿವಾದಿ ನೋಂದಾಯಿತಿ ಕ್ರಯಪತ್ರದ ಮೂಲಕ ಜಮೀನಿನ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾವು ಯಾವತ್ತು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಕೆಳ ನ್ಯಾಯಾಲಯ ನಮ್ಮ ವಿರುದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಅಸಲು ದಾವಾ ನಂಬರ 47/2017 ರಲ್ಲಿ ನೀಡಿದ್ದು, ಅಲ್ಲದೆ ಪೋಲಿಸ ಸಹಾಯ ಕೂಡಾ 4 ನೇ ಪ್ರತಿವಾದಿ ಮೆಹಬೂಬಗೆ ನೀಡಿರುತ್ತಾರೆ, ಅದರ ಮೇಲೆ ನಾವೆಲ್ಲರೂ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತವೆ ಎಂದರೆ ಸರಿ.

2 ಮತ್ತು 3 ನೇ ಪ್ರತಿವಾದಿಯರು ಇವತ್ತಿನ ತಾರೀಖನವರೆಗೆ ಅವರು ಪ್ರಾಪ್ತ ವಯಸ್ಕರಾಗಿರುತ್ತಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರು ಮೃತ ಪಾಂಡುರಂಗರಾವರವರ ವಾರಸುದಾರರು ಇರುತ್ತಾರೆ ಎಂದರೆ ಸರಿ.

ನನ್ನ ತಂದೆ ಎಷ್ಟು ಭೂಮಿ ಮಾರಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸರ್ವೇ ನಂಬರ 120, ಸರ್ವೇ ನಂಬರ 8, ಸರ್ವೇ ನಂಬರ 131 ಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯರು ಅಡಮಾನ ಬಿಡುಗಡೆ ಪತ್ರವನ್ನು ರೂ.3,00,000/- ತೆಗೆದುಕೊಂಡು ಮಾಡಿಕೊಟ್ಟಿರುತ್ತಾರೆ ಎಂದು ತೋರಿಸಿದ ಒಂದು ದಾಖಲಾತಿ ಮೇಲೆ ಇರುವ ಲತಿಕಾ ಅಂದರೆ 1 ನೇ ಪ್ರತಿವಾದಿ ಇರುವ ಛಾಯಾಚಿತ್ರವನ್ನು ನೋಡಿ ಗುರುತಿಸುತ್ತಾರೆ. ನಾವು ಲತಿಕಾ ಅಂದರೆ 1 ನೇ ಪ್ರತಿವಾದಿಗೆ ಸದರಿ ದಾಖಲಾತಿ ಅಂದರೆ ಅಡಮಾನ ಬಿಡುಗಡೆ ಪತ್ರದ ಬಗ್ಗೆ ಕೇಳಿದ್ದಿರಾ ಎನ್ನುವ ಪ್ರಶ್ನೆಗೆ, ಸಾಕ್ಷಿ ನನಗೆ ಗೊತ್ತೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ಪಾಂಡುರಂಗರಾವರು ತಮ್ಮ ಕುಟುಂಬದ ಅಡಚಣೆ ಸಲುವಾಗಿ 4 ನೇ ಪ್ರತಿವಾದಿ ಮೆಹಬೂಬಗೆ ಜಮೀನನ್ನು ಮಾರಾಟ ಮಾಡಿದ್ದರೂ ಹಾಗೂ 5 ನೇ ಪ್ರತಿವಾದಿ ಮಹಾದೇವಪ್ಪರಿಗೆ ನೊಂದಾಯಿತ ಅಡಮಾನ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

ಈ ಬಗ್ಗೆ ನೋಂದಾಯತ ಕ್ರಯಪತ್ರ ಮತ್ತು ಅಡಮಾನ ಪತ್ರಗಳ ಆಗಿರುವ ಬಗ್ಗೆ ಗೊತ್ತಿರುತ್ತದೆ.

ನನ್ನ ಅಣ್ಣ ಪಾಂಡುರಂಗರಾವರಿಗೆ ಕೆಟ್ಟ ಅಭ್ಯಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಸಂಬಾಯಿತ ಮತ್ತು ಸಜ್ಜನ ವ್ಯಕ್ತಿಯಾಗಿ ಸಮಾಜದಲ್ಲಿ ತಮ್ಮದೇ ಆದ ಒಂದು ಗೌರವ ಇಟ್ಟುಕೊಂಡಿದ್ದರು ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಗಳಿಗೆ ನನ್ನ ಅಣ್ಣ ಪಾಂಡುರಂಗರಾವ ಮೋಸ ಮಾಡಿರುತ್ತಾನೆ ಎನ್ನುವ ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ಜೀವಂತ ಇರುವ ಕಾಲಕ್ಕೆ ಗ್ರಾಮದಲ್ಲಿ ಇರುವ ಯಾರಿಗಾದರೂ ಮೋಸ ಮಾಡಿದ್ದಾರೆಯೆ ಎನ್ನುವ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಗೆ ಈ ಮೊದಲು ಅಡಮಾನ ಮಾಡಿಕೊಟ್ಟಿದ್ದು ತದನಂತರ ಅದರ ಹಣವನ್ನು ಪಾವತಿ ಮಾಡಿ ಕಬ್ಜಾ ಪಡೆದುಕೊಂಡು 4 ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ-6 ರಲ್ಲಿರುವ ಛಾಯಾಚಿತ್ರ ನನ್ನ ಅಣ್ಣನದಾಗಿರುತ್ತದೆ ಎಂದರೆ ಸರಿ. ಅಲ್ಲದೆ ಅದರಲ್ಲಿರುವ ನನ್ನ ಅಣ್ಣನ ಸಹಿಯನ್ನು ನಿಡಿ-6(ಡಿ) ಎಂದು ಗುರುತಿಸಲಾಯಿತು.

ಪಾಂಡುರಂಗರಾವ ಇರುವರೆಗೂ ತಮ್ಮ ಹೆಂಡತಿ ಮಕ್ಕಳು ಜೊತೆಯಲ್ಲಿ ಇರುತ್ತಿದ್ದು ಎಂದರೆ ಸರಿ. ಪಾಂಡುರಂಗರಾವ ಹೆಂಡತಿಯಾದ 1 ನೇ ಪ್ರತಿವಾದಿ ಲತಿಕಾ ಹಾಗೂ ನಾವೆಲ್ಲ ಸೇರಿ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಲತಿಕಾ ಓಡಾಡುತ್ತಾರೆ, ಮಾತನಾಡುತ್ತಾರೆ ಹಾಗೂ ನ್ಯಾಯಾಲಯಕ್ಕೆ ಬರುವ ಸ್ಥಿತಿಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಪಾಂಡುರಂಗರಾವರಿಗೆ ನಮ್ಮ ಕುಟುಂಬದ ಕರ್ತಾ ಅಂತ ಕುಟುಂಬದ ಅಡಚಣೆಗಾಗಿ ಜಮೀನುಗಳನ್ನು ಮಾರಾಟ ಮಾಡುವ ಹಾಗೂ ಅಡಮಾನ ಮಾಡುವ ಅಧಿಕಾರ ಇತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮೆಹಬೂಬನಿಂದ ಭೂಮಿ ಕಸಿದುಕೊಳ್ಳಬೇಕು ಹಾಗೂ 5 ನೇ ಪ್ರತಿವಾದಿ ಮಹಾದೇವಪ್ಪನಿಗೆ ಹಣ ಕೊಡಬಾರದು ಎಂಬ ಉದ್ದೇಶದಿಂದ ನಾವೆಲ್ಲರೂ ಸೇರಿ ಈ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರ ಮತ್ತು ಅಡಮಾನ ಪತ್ರ ನಮ್ಮೆಲ್ಲರ ಮೇಲೆ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ತೀರಿಕೊಂಡ ನಂತರ ದಾವಾ ಸ್ವತ್ತಿನ ದಾಖಲೆಗಳನ್ನು ತೆಗೆದುಕೊಂಡು ನೋಡಿದಾಗ ಕ್ರಯಪತ್ರ ಮತ್ತು ಅಡಮಾನ ಪತ್ರದ ಬಗ್ಗೆ ಗೊತ್ತಾಗಿರುತ್ತದೆ, ಆಗ ಈ ದಾವೆ ಸಲ್ಲಿಸಿರುತ್ತೇವೆ. ನೋಂದಾಯಿತ ಕ್ರಯಪತ್ರ ಮತ್ತು ಅಡಮಾನ ಪತ್ರ ಮಾಡುವ ಕಾಲಕ್ಕೆನೆ ನಮಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನನ್ನ ಅಣ್ಣ ತೀರಿಕೊಂಡ ನಂತರ ಮಾರಾಟ ಮಾಡಿದ ಹಾಗೂ ಅಡಮಾನ ಮಾಡಿದ ವಿಷಯ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

**P.W-1**

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ನಮ್ಮ ಹಕ್ಕನ್ನು ಕೇಳಲು ಈ ದಾವೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಆಳಂದ